ಕೇಂದ್ರದ ಹಳೆಯ ಆಸ್ಪತ್ರೆಯ ಕಟ್ಟಡವನ್ನು ಆರೋಗ್ಯ ಇಲಾಖೆಗೆ ಅವಶ್ಯ ಬಿದ್ದಲ್ಲಿ ಹಿಂದಿರುಗಿಸುವ ಕರಾರಿನ ಮೇರೆಗೆ ಸರ್ಕಾರದ ಆರೋಗ್ಯ ಇಲಾಖೆ ಪತ್ರ ಸಂ: ಆಕುಕ/758/ಸಿಜೆಎಂ/2004 ದಿನಾಂಕ: 4-12-2004 ರನ್ವಯ ಕಂದಾಯ ಇಲಾಖೆಗೆ ಹಸ್ತಾಂತರಿಸಲಾಗಿದೆ.

ಆ) (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

776 ಶ್ರೀ ರಘುಪತಿ ಭಟ್ ಕೆ. (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದ ಜನಸಾಮಾನ್ಯರಿಗೆ / ರೈತಾಪಿ ಜನರಿಗೆ ಸ್ವಂತ ವಾಸ್ತವದ ಮನೆ ರಚನೆಗೆ ಮೂಲೀಹಕ್ಕಿನ ಜಮೀನು ಮತ್ತು ಭೂ ನ್ಯಾಯಮಂಡಳಿಯಿಂದ ನೊಂದಾಯಿಸಿದ 0.05 ರಿಂದ 0.10 ಸೆಂಟ್ಸ್ ಒಳಗಿನ ಜಮೀನುಗಳನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸುವಾಗ ಇರುವ ಪ್ರಬೇಧಗಳಿಂದಾಗಿ ನಿರಾಕ್ಷೇಪಣಾ ಪತ್ರ ಪಡೆಯುವಾಗ ಕಾನೂನು ತೊಡಕಿನಿಂದ ಆಗುತ್ತಿರುವ ಸಮಸ್ಯೆಗಳನ್ನು ಸರಳೀಕರಣಗೊಳಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ; ನಡೆಸಿದ್ದಲ್ಲಿ, ಯಾವ ಕ್ರಮ ಕೈಗೊಂಡಿದೆ;

ಆ) ಸಾಮಾನ್ಯ ಜನತೆ ಹಾಗೂ ರೈತರು ಯಾವಾಗ ಈ ಕ್ಲಿಷ್ಟಕರ ಸಮಸ್ಯೆಯಿಂದ ಮುಕ್ತಿ ಪಡೆಯಲು ಸರ್ಕಾರ ಕ್ರಮ ಕೈಗೊಳ್ಳಲಿದೆ;

ಇ) ಹಿಂದೆ ನೀಡಿರುವ ಭರವಸೆಯಂತೆ ಕೃಷಿ ಭೂಮಿ ಪರಿವರ್ತನೆ ನಿಯಮಾವಳಿಗಳನ್ನು ಸರಳೀಕರಣಗೊಳಿಸಿ / ರದ್ದುಪಡಿಸಿ ಆದೇಶ ಹೊರಡಿಸಲು ಸರ್ಕಾರ ಬದ್ಧವಿದೆಯೇ?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 95(2)ಬಿ ರಂತೆ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮೂಲಿಹಕ್ಕಿಗೆ ಸಂಬಂಧಿಸಿದ ಜಮೀನನ್ನು ತಹಶೀಲ್ದಾರರು ಹಾಗೂ ಭೂನ್ಯಾಯ ಮಂಡಳಿಯಿಂದ ಮಂಜೂರಾತಿಯಾಗಿರುವ ಜಮೀನಿಗೆ ಜಿಲ್ಲಾಧಿಕಾರಿಯ ವರಿಂದ ಭೂ ಪರಿವರ್ತನಾ ಆದೇಶ ಹೊರಡಿಸಲಾಗುತ್ತಿದೆ. ಈ ಎರಡು ಪ್ರಭೇದಗಳಿಗೆ ಸಂಬಂಧಿಸಿದಂತೆ ಸರಕಾರದ ಸುತ್ತೋಲೆ ಸಂ: ಆರ್‌ಡಿ 7 ಎಲ್‌ಜಿಪಿ 95, ದಿನಾಂಕ: 07.06.1999 ರಂತೆ ಅವಶ್ಯವಿರುವ ದಾಖಲಾತಿ

ಗಳನ್ನು ಪಡೆಯಲಾಗುತ್ತಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆಯಲ್ಲಿ ಹೇಳಲಾಗಿರುವಂತೆ ಉಡುಪಿ ಜಿಲ್ಲೆಯಲ್ಲಿ–ತಹಶೀಲ್ದಾರರು ಮೂಲಿಹಕ್ಕಿನ ಜಮೀನಿಗೆ ಸಂಬಂಧಿಸಿದಂತೆ ಆದೇಶಗಳನ್ನು ನೀಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಭೂ ನ್ಯಾಯ ಮಂಡಳಿಯಿಂದ ಮಂಜೂರಾತಿಯಾಗಿರುವ ಜಮೀನಿಗೆ ಆದೇಶಗಳನ್ನು ನೀಡುತ್ತಿದ್ದಾರೆ. ಈಗಾಗಲೇ ಸರಕಾರವು ಸುತ್ತೋಲೆ ಸಂ: ಆರ್‌ಡಿ 56 ಎಲ್‌ಜಿಪಿ 2008 ದಿನಾಂಕ: 10.09.2008 ರಂತೆ ಭೂ ಪರಿವರ್ತನೆಗೆ ಈ ಹಿಂದೆ ಇದ್ದ ಏಕಗವಾಕ್ಷಿ ಪದ್ಧತಿಯನ್ನು ಕೈಬಿಟ್ಟು ನಿಯಮಾವಳಿಗಳನ್ನು ಸರಳೀಕರಣಗೊಳಿಸಿದೆ.

ಆ) ಸಾರ್ವಜನಿಕರಿಂದ ಈ ಬಗ್ಗೆ ಬಂದಿರುವ ಮನವಿಗಳು ಸರ್ಕಾರದ ಹಂತದಲ್ಲಿ ಉಳಿದಿರುವುದಿಲ್ಲ.

ಇ) ಸರ್ಕಾರದ ಪರಿಗಣನೆಯಲ್ಲಿದೆ.

325 ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ತಾಲ್ಲೂಕು ಗೊರೂರು ಗ್ರಾಮ ಹೇಮಾವತಿ ಜಲಾಶಯಕ್ಕೆ ಹೊಂದಿಕೊಂಡಂತಿದ್ದ ಭಾಗಶಃ ಗ್ರಾಮವನ್ನು ಸ್ವಾಧೀನಪಡಿಸಿಕೊಂಡು ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆ ಪ್ರಾರಂಭವಾಗಿದೆಯೇ?

ಆ) ಹಾಗಿದ್ದಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.

ಆ) ಗೊರೂರು ಗ್ರಾಮದ 180 ಮನೆಗಳು ಹೇಮಾವತಿ ಜಲಾಶಯದಿಂದ ಶೀತಪೀಡಿತವಾಗಿದ್ದು ದಿನಾಂಕ: 3/1/2001 ರಂದು ಪ್ರಾರಂಭಿಸಿದ್ದ ಭೂಸ್ವಾಧೀನ ಪ್ರಕ್ರಿಯೆ ಅಸಿಂಧುಗೊಂಡಿರುತ್ತದೆ.

ಈ 180 ಮನೆಗಳ ಹಾಗೂ ನಾಲಾ ಮಧ್ಯದಲ್ಲಿ ಉಳಿದ 110, ಮನೆಗಳ 2ನೇ ಹಂತದ ಭೂಸ್ವಾಧೀನ ಪ್ರಕ್ರಿಯೆಯನ್ನು ಮೈಸೂರು ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿನ ಉನ್ನತ ಮಟ್ಟದ ಸಮಿತಿಯು ಸ್ಥಳ ತನಿಖೆ ಕೈಗೊಂಡು ವರದಿ ನೀಡಿದ ನಂತರ ತೀರ್ಮಾನಿಸಲಾಗುವುದು.